# ಮಕ್ಕಳು ಮತ್ತು ದುರ್ಬಲರಾಗಿರುವ ವಯಸ್ಕರ ರಕ್ಷಣೆಗಾಗಿ Network of Asia and Pacific Producers ನೀತಿ ಮತ್ತು ಕಾರ್ಯವಿಧಾನ

**ಡಿಸೆಂಬರ್ 2017**

**ಇವರೊಂದಿಗೆ ಕಾರ್ಯರೂಪಕ್ಕೆ ತರುವುದಕ್ಕಾಗಿ:** Network of Asia and Pacific Producers (*NAPP*), ಉದ್ಯೋಗಿಗಳು ಮತ್ತು ಉತ್ಪಾದಕರ Fairtrade/NAPP ಸಂಸ್ಥೆಗಳು, NAPP ಸಿಬ್ಬಂದಿ, NAPP ಜೊತೆ ಕೆಲಸ ಮಾಡುತ್ತಿರುವ ಸ್ವಯಂಸೇವಕರು, NAPP ಗಳ ಆಡಳಿತ ಮಂಡಳಿ ನಿರ್ದೇಶಕರು ಮತ್ತು ವಿವಿಧ ಸಮಿತಿಗಳು, ಮತ್ತು NAPP ಗಾಗಿ ಕೆಲಸ ಮಾಡುವಾಗ ಅಥವಾ ಅಧಿಕೃತ ಪ್ರವಾಸ ಕೈಗೊಂಡಾಗ ಮಕ್ಕಳು ಮತ್ತು ದುರ್ಬಲರಾಗಿರುವ ವಯಸ್ಕರೊಂದಿಗೆ ಸಂಪರ್ಕದಲ್ಲಿರುವ, ಸಂಸ್ಥೆಯನ್ನು ಪ್ರತಿನಿಧಿಸುತ್ತಿರುವ ಯಾವುದೇ ವ್ಯಕ್ತಿ.

**ಕಾರ್ಯತಂತ್ರ:** ಸಂಬಂಧಿತ ನಿಂದನೆ ಮತ್ತು ಶೋಷಣೆ ಸೇರಿದಂತೆ, ಬಾಲಕಾರ್ಮಿಕ ಪದ್ಧತಿ ಮತ್ತು ಶೋಷಿಸುವ ಕೆಲಸ ಮಾಡಿಸಿಕೊಳ್ಳುವುದನ್ನು ನಿವಾರಿಸುವ ಗುರಿಯತ್ತ ಸಾಗುವ ನಿಟ್ಟಿನಲ್ಲಿ, ಮಕ್ಕಳು ಮತ್ತು ದುರ್ಬಲರಾಗಿರುವ ವಯಸ್ಕರನ್ನು ರಕ್ಷಿಸುವುದನ್ನು ಉತ್ತೇಜಿಸುವ ಒಂದು ವ್ಯವಸ್ಥೆಯನ್ನು ರೂಪಿಸುವುದು NAPP ಯ ಮಾರ್ಗವಾಗಿದೆ.

## A. ಉದ್ದೇಶ:

ಮಕ್ಕಳ ಹಕ್ಕುಗಳ ವಿಶ್ವಸಂಸ್ಥೆಯ ಒಡಂಬಡಿಕೆ ಮತ್ತು ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಗಳು ವಿಶ್ವದಲ್ಲಿ ಮಕ್ಕಳ ಹಕ್ಕುಗಳು ಸೇರಿದಂತೆ, ವ್ಯಕ್ತಿಯ ಹಕ್ಕುಗಳನ್ನು ಪ್ರತಿಷ್ಠಾಪಿಸುತ್ತವೆ ಮತ್ತು ಉತ್ತೇಜಿಸುತ್ತವೆ.

NAPP (Network of Asia and Pacific Producers) ನಲ್ಲಿ, ನಾವು ಈ ಹಕ್ಕುಗಳನ್ನು ಬೆಂಬಲಿಸುತ್ತೇವೆ ಮತ್ತು ಮಕ್ಕಳು ಮತ್ತು ದುರ್ಬಲರಾಗಿರುವ ವಯಸ್ಕರ ರಕ್ಷಣೆ, ಅಭಿವೃದ್ಧಿ ಹಾಗೂ ಯೋಗಕ್ಷೇಮಕ್ಕಾಗಿ ಅವರ ಹಕ್ಕುಗಳ ಗುರುತಿಸುವಿಕೆಯನ್ನು ಖಚಿತಪಡಿಸುವುದಕ್ಕಾಗಿ ನಾವು ಕೆಲಸ ಮಾಡುತ್ತಿದ್ದೇವೆ. ಮಕ್ಕಳು ಮತ್ತು ದುರ್ಬಲರನ್ನು ಯಾವುದೇ ಮತ್ತು ಎಲ್ಲ ಬೆದರಿಕೆಗಳು ಮತ್ತು ಹಾನಿಗಳಿಂದ ರಕ್ಷಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲು ನಾವು ಬದ್ಧರಾಗಿದ್ದೇವೆ.

NAPP ಎಲ್ಲ ಸಿಬ್ಬಂದಿ, ಸಣ್ಣ ಉತ್ಪಾದಕರು ಮತ್ತು ಕಾರ್ಮಿಕರ ಸಂಘಟನೆಗಳು, ನಮ್ಮ ನಿರ್ದೇಶಕರ ಮಂಡಳಿ ಮತ್ತು ಅದರ ಆಯೋಗ, ಹಾಗೂ NAPP ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡಿರುವ ಇತರ ಯಾವುದೇ ವ್ಯಕ್ತಿ, ಮಕ್ಕಳು ಮತ್ತು ದುರ್ಬಲರು ನಮ್ಮೊಂದಿಗೆ ಹೊಂದಿರುವ ಸಂಬಂಧದ ಆಧಾರದಲ್ಲಿ ಅವರು ವರದಿಗೆ ಅನುಸಾರ ಅವರ ಅತ್ಯುತ್ತಮ ಹಿತಾಸಕ್ತಿಗಾಗಿ ಕೆಲಸ ಮಾಡಬೇಕು ಎಂದು NAPP ನಿರೀಕ್ಷಿಸುತ್ತದೆ.

ಮಕ್ಕಳ ಮತ್ತು ದುರ್ಬಲರಾಗಿರುವ ವಯಸ್ಕರ ರಕ್ಷಣೆಗಾಗಿನ ಈ ನೀತಿಯು ಅವರ ಹಕ್ಕುಗಳನ್ನು ಎಲ್ಲಕ್ಕಿಂತ ಮೇಲ್ಮಟ್ಟದಲ್ಲಿ ಗುರುತಿಸುವ ನಮ್ಮ ಸ್ಥಾನವನ್ನು ಆಧರಿಸಿದೆ, ಹಾಗೂ ನಮ್ಮ ಕಾರ್ಯಗಳು ಮಕ್ಕಳ ಹಕ್ಕುಗಳ ಕುರಿತ ವಿಶ್ವಸಂಸ್ಥೆಯ ಒಡಂಬಡಿಕೆ ಮತ್ತು ಮಾನವ ಹಕ್ಕುಗಳ ವಿಶ್ವಸಂಸ್ಥೆಯ ಘೋಷಣೆಗೆ ಅನುಸಾರವಾಗಿವೆ, ವಿಶೇಷವಾಗಿ ಮಕ್ಕಳು ಮತ್ತು ದುರ್ಬಲರಾಗಿರುವ ವಯಸ್ಕರ ರಕ್ಷಣೆಗೆ ಸಂಬಂಧಿಸಿದ ನಿಯಮಗಳನ್ನು ಪಾಲಿಸುತ್ತವೆ ಎನ್ನುವುದನ್ನು ಖಚಿತಪಡಿಸಿಕೊಳ್ಳಲು ನಾವು ಬದ್ಧರಾಗಿದ್ದೇವೆ.

ಹಾನಿ, ನಿಂದನೆ ಮತ್ತು ಶೋಷಣೆಯ ವಿರುದ್ಧ ಮಕ್ಕಳು ಮತ್ತು ದುರ್ಬಲರಾಗಿರುವ ವಯಸ್ಕರ ಹಕ್ಕುಗಳನ್ನು ರಕ್ಷಿಸಲು ನಾವು ಕಾರ್ಯ ನಿರ್ವಹಿಸುತ್ತೇವೆ ಎನ್ನುವುದನ್ನು ಖಚಿತಪಡಿಸುವುದಕ್ಕೆ ನೆರವಾಗಲು NAPP ಸಕ್ರಿಯ ಕ್ರಮಗಳನ್ನು ಕೈಗೊಳ್ಳುತ್ತದೆ.

**B. ವ್ಯಾಖ್ಯಾನಗಳು: ಮಕ್ಕಳು:** 18 ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನ ಯಾವುದೇ ವ್ಯಕ್ತಿ.

***ಬಾಲ ಕಾರ್ಮಿಕ ಪದ್ಧತಿ:***

"ಬಾಲ ಕಾರ್ಮಿಕ ಪದ್ಧತಿ" ಎನ್ನುವ ಪದಕ್ಕೆ ಯಾವುದೇ ಸಾರ್ವತ್ರಿಕ ವ್ಯಾಖ್ಯಾನ ಇಲ್ಲ ಆದರೆ ಬಾಲಕಾರ್ಮಿಕ ಪದ್ಧತಿ ಯನ್ನು ವ್ಯಾಖ್ಯಾನಿಸುವ ಮೂಲಭೂತ ಅಂತಾರಾಷ್ಟ್ರೀಯ ಮತ್ತು ಕಾನೂನು ಸಾಧನಗಳು, ಸಂಬಂಧಿಸಿದ ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ (ILO) ಒಡಂಬಡಿಕೆಗಳು ಮತ್ತು ಮಕ್ಕಳ ಹಕ್ಕುಗಳ ಕುರಿತ ವಿಶ್ವಸಂಸ್ಥೆಯ ಒಡಂಬಡಿಕೆ (CRC) ಗಳಾಗಿವೆ.

ILO ಅನುಸಾರ, ಬಾಲ ಕಾರ್ಮಿಕತೆ ಅಂದರೆ ಈ ಕೆಳಗಿನ ಕೆಲಸಗಳಾಗಿವೆ:

- ಮಾನಸಿಕವಾಗಿ, ದೈಹಿಕವಾಗಿ, ಸಾಮಾಜಿಕವಾಗಿ ಅಥವಾ ನೈತಿಕವಾಗಿ ಮಕ್ಕಳಿಗೆ ಅಪಾಯಕರ, ಶೋಷಣೆಯುಂಟುಮಾಡುವ ಮತ್ತು ಹಾನಿಕರವಾಗಿರುವಂಥವು; ಮತ್ತು
- ಮಗು ಶಾಲೆಗೆ ಹೋಗುವುದಕ್ಕೆ ಈ ಕೆಳಗಿನವುಗಳ ಮೂಲಕ ಅಡಚಣೆ ಉಂಟುಮಾಡುತ್ತದೆ:
  - ಶಾಲೆಗೆ ಹಾಜರಾಗುವ ಅವರ ಅವಕಾಶವನ್ನು ಕಸಿಯುತ್ತದೆ;
  - ಅಕಾಲಿಕವಾಗಿ ಶಾಲೆ ಬಿಡುವಂತೆ ಅವರಿಗೆ ಕಟ್ಟುಪಾಡು ಹೇರುತ್ತದೆ; ಅಥವಾ
  - ಅತಿ ದೀರ್ಘ ಮತ್ತು ಪರಿಶ್ರಮದ ಕೆಲಸ ಮಾಡುವುದರ ಜೊತೆಗೆ ಅವರು ಶಾಲೆಗೆ ಹಾಜರಾಗಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸುತ್ತದೆ.

ಕೆಲಸವನ್ನು ಅಪಾಯಕರ ಎಂದು ಉಲ್ಲೇಖಿಸಲಾಗಿದೆ ಏಕೆಂದರೆ, ಅದನ್ನು ಮಾಡುವ ಸ್ವರೂಪ ಅಥವಾ ಪರಿಸ್ಥಿತಿಗಳ ಕಾರಣದಿಂದ, ವಯಸ್ಕರು ಅಥವಾ ಕೆಲಸ ಮಾಡುವುದಕ್ಕಿರುವ ಕನಿಷ್ಟ ವಯೋ ಅರ್ಹತೆಗಿಂತ ಹೆಚ್ಚು ವಯಸ್ಸಿನ ಮಕ್ಕಳ ದೈಹಿಕ, ಮಾನಸಿಕ ಅಥವಾ ನೈತಿಕ ಯೋಗಕ್ಷೇಮಕ್ಕೆ ಅದು ಅಪಾಯವುಂಟುಮಾಡುತ್ತದೆ.

ನಿಸ್ಸಂದೇಹವಾಗಿ ಅತ್ಯಂತ ಕೆಟ್ಟ ನಮೂನೆಯ ಯಾವುದೇ ಬಾಲ ಕಾರ್ಮಿಕ ಪದ್ಧತಿ, ಅಂತಾರಾಷ್ಟ್ರೀಯವಾಗಿ ವ್ಯಾಖ್ಯಾನಿಸಿದ ಜೀತ, ಮಾನವ ಕಳ್ಳಸಾಗಾಣಿಕೆ, ಸಾಲಕ್ಕಾಗಿನ ಜೀತ ಅಥವಾ ಇತರ ನಮೂನೆಗಳ ಶೋಷಣೆಯ ಕೆಲಸಗಳು, ಉದಾಹರಣೆಗೆ ಶಸ್ತ್ರಾಸ್ತ್ರ ಸಂಘರ್ಷದಲ್ಲಿ ಮಕ್ಕಳ ಬಲವಂತದ ನಿಯೋಜನೆ, ವಾಣಿಜ್ಯಾತ್ಮಕ ಲೈಂಗಿಕ ಶೋಷಣೆ ಮತ್ತು ಅಶ್ಲೀಲಚಿತ್ರಗಳಲ್ಲಿ ಬಳಕೆ, ಅಥವಾ ಕಾನೂನುಬಾಹಿರ ಚಟುವಟಿಕೆಗಳು.

***ಮಕ್ಕಳ ರಕ್ಷಣೆ:***

NAPP ಯಲ್ಲಿ ನಾವು ಮಕ್ಕಳ ರಕ್ಷಣೆಯನ್ನು, ಅತ್ಯಂತ ಕೆಟ್ಟ ನಮೂನೆಗಳ ಕೆಲಸ, ಹಿಂಸೆ, ಶೋಷಣೆ, ನಿಂದನೆ ಮತ್ತು ನಿರ್ಲಕ್ಷ್ಯಗಳಿಂದ ಮಕ್ಕಳನ್ನು ರಕ್ಷಿಸಲು ತೆಗೆದುಕೊಂಡ ಕ್ರಮಗಳು ಎಂದು ವ್ಯಾಖ್ಯಾನಿಸುತ್ತೇವೆ, ಮತ್ತು ಇದೇ ವೇಳೆ, ಮಕ್ಕಳ ಯೋಗಕ್ಷೇಮ ಮತ್ತು ಅಭಿವೃದ್ಧಿಯನ್ನು ಬೆಂಬಲಿಸುತ್ತೇವೆ.

***ಮಕ್ಕಳ ಯೋಗಕ್ಷೇಮ ಮತ್ತು ಅಭಿವೃದ್ಧಿ:***

ಉತ್ಪಾದಕ ವಯಸ್ಕರು ಮತ್ತು ಸಕ್ರಿಯ ನಾಗರಿಕರಾಗುವ ಸಿದ್ಧತೆಗಾಗಿ ಮಕ್ಕಳು ಸಾಮರ್ಥ್ಯಗಳು ಮತ್ತು ಜ್ಞಾನವನ್ನು ಬೆಳೆಸಿಕೊಳ್ಳುತ್ತಾರೆ ಮತ್ತು ಪಡೆದುಕೊಳ್ಳುತ್ತಾರೆ, ಹಾಗೂ ಅದನ್ನು ಅವರು ಯೋಗಕ್ಷೇಮದ ಸಕಾರಾತ್ಮಕ ವಾತಾವರಣದಲ್ಲಿ

ಬೆಳೆಸಿಕೊಳ್ಳುತ್ತಾರೆ. ಕೌಶಲ್ಯಗಳು ಮತ್ತು ಜ್ಞಾನ ಗಳಿಸಿಕೊಳ್ಳುವಿಕೆಯು ಔಪಚಾರಿಕ/ ವೃತ್ತಿಪರ ಶಿಕ್ಷಣದ ಮೂಲಕ ಮತ್ತು ಆಟವಾಡುವುದು ಸೇರಿದಂತೆ, ಕೆಲಸ ಮತ್ತು ಜೀವನದ ಅನುಭವಗಳ ಮೂಲಕ ನಡೆಯುತ್ತದೆ.

***ಶೋಷಣೆಯ ಮೂಲಕ ಕೆಲಸ:***

ಶೋಷಣೆಯ ಮೂಲಕ ಕೆಲಸದಲ್ಲಿ ಬೆದರಿಕೆ ಅಥವಾ ದಂಡದ ಮೂಲಕ ವ್ಯಕ್ತಿಯಿಂದ ಮಾಡಿಸಿದ ಕೆಲಸ ಅಥವಾ ಆತ ಅಥವಾ ಆಕೆ ಸ್ವ ಇಚ್ಛೆಯಿಂದ ತೊಡಗಿಕೊಂಡಿಲ್ಲದ ಕೆಲಸ, ಹಾಗೂ ಜೀತ ಮತ್ತು ಅಪಹರಣ, ಸಾರ್ವಜನಿಕ ಮತ್ತು ಜೈಲು ಕೆಲಸಗಳ ದುರ್ಬಳಕೆ, ಬಲವಂತದ ನೇಮಕಾತಿ, ಸಾಲದ ಜೀತ ಮತ್ತು ಶೋಷಣೆಯ ಕೆಲಸದ ಸನ್ನಿವೇಶಗಳಲ್ಲಿ ಮನೆಗೆಲಸ, ಮತ್ತು ಜೀತ ಮತ್ತು ಜೀತಕ್ಕೆ ಸಮನಾದ ಪದ್ಧತಿಗಳು ಸೇರಿದಂತೆ, ಕೆಲಸ ಅಥವಾ ಲೈಂಗಿಕ ಉದ್ದೇಶಗಳಿಗಾಗಿ ರಾಷ್ಟ್ರೀಯ ಅಥವಾ ಅಂತಾರಾಷ್ಟ್ರೀಯ ಮಾನವ ಕಳ್ಳಸಾಗಾಣಿಕೆ ಇವುಗಳು ಸೇರಿರುತ್ತವೆ. ಶೋಷಣೆಯ ಮೂಲಕ ಕೆಲಸದ ಬಗ್ಗೆ ILO ವ್ಯಾಖ್ಯಾನವು ಷರತ್ತುರಹಿತ ಅತ್ಯಂತ ಕೆಟ್ಟ ವಿಧಾನಗಳ ಬಾಲ ಕಾರ್ಮಿಕತೆಯನ್ನೂ (ILO 182ನಲ್ಲಿ ನಿರ್ದಿಷ್ಟಪಡಿಸಿದಂತೆ) ಒಳಗೊಂಡಿರುತ್ತದೆ.

***ದುರ್ಬಲರಾಗಿರುವ ವಯಸ್ಕರು:***

18 ವರ್ಷ ವಯಸ್ಸಿಗಿಂತ ಮೇಲ್ಪಟ್ಟಿರುವ ಹಾಗೂ ಮೂಲಭೂತವಾಗಿ ಶೋಷಣೆಯ ಕೆಲಸದ ಪದ್ಧತಿಗಳಿಂದ ಉದ್ಭವಿಸುವ ಗಮನಾರ್ಹ ಹಾನಿ ಅಥವಾ ಗಂಭೀರ ಶೋಷಣೆಗಳ ವಿರುದ್ಧ ತನ್ನನ್ನು ರಕ್ಷಿಸಿಕೊಳ್ಳಲು ಸಾಧ್ಯವಾಗದಿರುವ ವ್ಯಕ್ತಿ.

**C: ನೀತಿಯ ವ್ಯಾಪ್ತಿ:**

ಈ ನೀತಿಯು ಎಲ್ಲ NAPP ಸಿಬ್ಬಂದಿಗಳು, ಮತ್ತು NAPP ನಿರ್ದೇಶಕರ ಮಂಡಳಿ ಮತ್ತು ಅದರ ಸಮಿತಿಗಳಿಗೆ ಅನ್ವಯವಾಗುತ್ತದೆ. ಸಂಸ್ಥೆಯನ್ನು ಪ್ರತಿನಿಧಿಸುವ ಮತ್ತು/ಅಥವಾ ನೇಮಕಗೊಂಡಿರುವ ಎಲ್ಲ ವ್ಯಕ್ತಿಗಳು, ಮತ್ತು NAPP ಗಾಗಿ ಕೆಲಸ ಮಾಡುವಾಗ ಅಥವಾ ಅಧಿಕೃತ ಪ್ರಯಾಣ ಮಾಡುವಾಗ ನಿರ್ದಿಷ್ಟವಾಗಿ ಮಕ್ಕಳ ಸಂಪರ್ಕಕ್ಕೆ ಬರುವವರ ಹೊಣೆಗಾರಿಕೆಗಳು ಮತ್ತು ಅನುಸರಿಸಬೇಕಾದ ಕಾರ್ಯವಿಧಾನಗಳನ್ನು ಇದು ವಿವರಿಸುತ್ತದೆ.

ಮುಂದುವರಿದು, ಈ ನೀತಿಯನ್ನು ತಮ್ಮ ವ್ಯಾಪ್ತಿಯೊಳಗೆ ಜಾರಿಗೊಳಿಸುವುದನ್ನು ಉತ್ತೇಜಿಸುವಂತೆ ಮತ್ತು/ಅಥವಾ NAPP ಯ ಸಾಮಾನ್ಯ ನೀತಿಯ ಆಧಾರದಲ್ಲಿ ತಮ್ಮ ಸ್ವಂತ ನೀತಿಗಳು ಮತ್ತು ಕಾರ್ಯವಿಧಾನಗಳನ್ನು ಅಭಿವೃದ್ಧಿಪಡಿಸುವಂತೆ ಸಣ್ಣ ಉತ್ಪಾದಕರು ಮತ್ತು ಕಾರ್ಮಿಕರ ರಾಷ್ಟ್ರೀಯ ಜಾಲಗಳು ಮತ್ತು ಸಂಘಟನೆಗಳಿಗೆ NAPP ಕರೆ ನೀಡುತ್ತದೆ.

**D. ಘೋಷಣೆ:**

**ಮಕ್ಕಳು ಮತ್ತು ದುರ್ಬಲರಾಗಿರುವ ವಯಸ್ಕರ ಪರವಾಗಿ ರಕ್ಷಣಾತ್ಮಕ ಕ್ರಮ ಕೈಗೊಳ್ಳಲು, ಹಾಗೂ ಅಗತ್ಯವಿದ್ದಾಗ,** ಈ ಉಪಖಂಡದಲ್ಲಿ (ಏಷ್ಯಾ ಮತ್ತು ಪೆಸಿಫಿಕ್) ನ್ಯಾಯೋಚಿತ ವಹಿವಾಟು ಉತ್ಪಾದನೆಯ ಸನ್ನಿವೇಶದಲ್ಲಿ ಉಪಸ್ಥಿತವಾಗಿರಬಹುದಾದ ಬಾಲಕಾರ್ಮಿಕ ಪದ್ಧತಿ ಅಥವಾ ಶೋಷಣೆಯ ಮೂಲಕ ಕೆಲಸದ ಅತ್ಯಂತ ಕೆಟ್ಟ ನಮೂನೆಗಳು ಸೇರಿದಂತೆ, ನಿಂದನೆ ಮತ್ತು ಶೋಷಣೆಯ ಪ್ರತಿ ಪ್ರಕರಣಗಳಲ್ಲಿ

**ಸುದೀರ್ಘ ರಕ್ಷಣೆಗೆ ದಾರಿತೋರುವ ಬೆಂಬಲವನ್ನು ಒದಗಿಸಲು NAPP ಬದ್ಧವಾಗಿದೆ.**

ಈ ಕಾರ್ಯಗಳ ಮೂಲಕ ಮಕ್ಕಳು, ಹದಿಹರೆಯದವರು ಮತ್ತು ದುರ್ಬಲರಾಗಿರುವ ವಯಸ್ಕರನ್ನು ಯಾವುದೇ ಹಾನಿಯಿಂದ ಸಕ್ರಿಯವಾಗಿ ರಕ್ಷಿಸಲು, ಮತ್ತು ರಕ್ಷಣೆಗಾಗಿನ ಮಕ್ಕಳ ಮತ್ತು ದುರ್ಬಲರಾಗಿರುವ ವಯಸ್ಕರ ಹಕ್ಕುಗಳ ಪೂರ್ಣ ಚಲಾವಣೆಯನ್ನು ಉತ್ತೇಜಿಸಲು NAPP ಬಯಸುತ್ತದೆ. ಮಕ್ಕಳು ಮತ್ತು ದುರ್ಬಲರಾಗಿರುವ ವಯಸ್ಕರಿಗೆ ಸುರಕ್ಷಿತವಾಗಿರುವ ಪದ್ಧತಿಗಳನ್ನು ಉತ್ತೇಜಿಸುವ ನಮ್ಮ ಹೊಣೆಗಾರಿಕೆಯನ್ನು, ಮತ್ತು ಅವರನ್ನು ಎಲ್ಲ ಬಗೆಯ ದುರಾಚಾರ, ನಿಂದನೆ ಮತ್ತು

ಯಾವುದೇ ಬಗೆಯ ಶೋಷಣೆಗಳಿಂದ ರಕ್ಷಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವುದನ್ನು ನಾವು ಗಂಭೀರವಾಗಿ ಪರಿಗಣಿಸುತ್ತೇವೆ. ಇದರ ಜೊತೆಗೆ, ನಿಂದನೆ ಮತ್ತು ಶೋಷಣೆ ಬಗ್ಗೆ ವರದಿ ಮಾಡುವ ಮಕ್ಕಳು ಮತ್ತು ದುರ್ಬಲರಾಗಿರುವ ವಯಸ್ಕರನ್ನು ರಕ್ಷಿಸಲು ಕ್ರಮ ಕೈಗೊಳ್ಳುವ ಬಗ್ಗೆ ನಾವು ಭರವಸೆ ನೀಡುತ್ತೇವೆ.

ಈ ಪದ್ಧತಿಗಳು ಪ್ರಾಥಮಿಕವಾಗಿ ಇವುಗಳ ಮೇಲೆ ಗಮನ ಹೊಂದಿರುತ್ತವೆ:

- NAPP ಯ ಸಿಬ್ಬಂದಿ, ನಿರ್ದೇಶಕರ ಮಂಡಳಿ, ರಾಷ್ಟ್ರೀಯ ಜಾಲ, ಉತ್ಪಾದಕರು ಮತ್ತು ಕಾರ್ಮಿಕರ ಸಂಘಟನೆಗಳು, Fairtrade ಉತ್ಪಾದನೆಯ ಪ್ರಭಾವದೊಳಗಿರುವ ಸಮುದಾಯಗಳು (ಸಾಧ್ಯವಿದ್ದಾಗ), ಸಂಸ್ಥೆಯನ್ನು ಪ್ರತಿನಿಧಿಸುವ ಸ್ವಯಂಸೇವಕರು ಮತ್ತು ಇತರ ಯಾವುದೇ ವ್ಯಕ್ತಿಗಳಿಗೆ ತರಬೇತಿ ನೀಡುವುದು. ಈ ತರಬೇತಿಯು ಬಾಲ ಕಾರ್ಮಿಕ ಪದ್ಧತಿ ಮತ್ತು ಶೋಷಣೆ ಮೂಲಕ ಕೆಲಸದ ಅತ್ಯಂತ ಕೆಟ್ಟ ನಮೂನೆಗಳು ಸೇರಿದಂತೆ, ಬಾಲ ಕಾರ್ಮಿಕ ಪದ್ಧತಿಯ ವ್ಯಾಖ್ಯಾನದ ಮೇಲೆ, ಮತ್ತು ಅಂಥವುಗಳಿಗೆ ಸಂಬಂಧಿಸಿದ Fairtrade ಮಾನದಂಡಗಳ ಅನುಸರಣೆಯ ಮೇಲೆ ಗಮನ ಹರಿಸುತ್ತದೆ.
- ಮಕ್ಕಳ ಅಭಿವೃದ್ಧಿ, ದುರ್ಬಲರಾಗಿರುವ ವಯಸ್ಕರ ಯೋಗಕ್ಷೇಮ ಮತ್ತು ಪೀಳಿಗೆಯ ಬದಲಿಯ ಬಗ್ಗೆ ಗಮನ ಕೇಂದ್ರೀಕರಿಸಿರುವ ಯೋಜನೆಗಳ ಜಾರಿಯಲ್ಲಿ ಸದಸ್ಯ ಸಂಘಟನೆಗಳಿಗೆ ನೆರವು ನೀಡುವುದು.
- ಲಿಂಗ ಆಧರಿತ ಹಿಂಸೆಯ ಆರೋಪಗಳು ಮತ್ತು ಘಟನೆಗಳು ಸೇರಿದಂತೆ, ಬಾಲ ಕಾರ್ಮಿಕ ಪದ್ಧತಿ ಮತ್ತು ಶೋಷಣೆಯ ಮೂಲಕ ಕೆಲಸದ ಘಟನೆಗಳನ್ನು ಗುರುತಿಸಲು ಮತ್ತು ಉತ್ಪಾದಕರ ಸಂಘಟನೆಗಳಿಗೆ ನೆರವು ನೀಡುವುದು.

- ಯುವಕರ ಸೇರ್ಪಡೆ, Fairtrade International ಅಥವಾ ಇತರ ತಜ್ಞರು ಅಭಿವೃದ್ಧಿಪಡಿಸಿರುವಂತೆ ಸಮುದಾಯ ಆಧರಿತ ನಿಗಾ ಮತ್ತು ಪರಿಹಾರ ವ್ಯವಸ್ಥೆಗಳನ್ನು ರೂಪಿಸುವುದರಲ್ಲಿ ಆಸಕ್ತರಾಗಿರುವ ಸದಸ್ಯ ಸಂಘಟನೆಗಳಿಗೆ ತಾಂತ್ರಿಕ ನೆರವು ನೀಡುವುದು.

- ಬಾಲ ಕಾರ್ಮಿಕ ಪದ್ಧತಿ ಅಥವಾ ಶೋಷಣೆಯ ಮೂಲಕ ಕೆಲಸದಿಂದ ದೌರ್ಜನ್ಯಕ್ಕೆ ಒಳಗಾಗಿರುವ ಅಥವಾ ಲಿಂಗ ಆಧರಿತ ಹಿಂಸೆಯನ್ನು ಎದುರಿಸುತ್ತಿರುವ ಶಂಕಿತ ವ್ಯಕ್ತಿಗಳಿಗೆ ಹೆಚ್ಚುವರಿ ಹಾನಿಯಾಗದಂತೆ ಖಚಿತಪಡಿಸುವುದಕ್ಕಾಗಿ ಸಂಬಂಧಪಟ್ಟ ರಕ್ಷಣಾ ಪ್ರಾಧಿಕಾರಗಳು ಅಥವಾ ತಜ್ಞ ಸಂಸ್ಥೆಗಳಿಗೆ ವರದಿ ಮಾಡಲು, ಸ್ಪಷ್ಟ ಪುರಾವೆಯೊಂದಿಗೆ ಒಂದು ಪ್ರಕರಣ ದಾಖಲಾದಾಗ ಬೆಂಬಲ ನೀಡಲು ಮತ್ತು ನಮಗೆ ಸಲಹೆ ಒದಗಿಸುವುದಕ್ಕಾಗಿ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಕುರಿತ ಒಡಂಬಡಿಕೆಯ ಮೇಲೂ ಆಧರಿತವಾಗಿರುವ ಮತ್ತು ILO 139 ಹಾಗೂ ILO 182 ರ ಅನುಸರಣೆಯನ್ನು ಉತ್ತೇಜಿಸುವ ಮತ್ತು ಶೋಷಣೆಯ ಮೂಲಕ ಕೆಲಸ ಮತ್ತು ತಾರತಮ್ಯದ ಕುರಿತ 111 ಸೇರಿದಂತೆ, ILO ಒಡಂಬಡಿಕೆಗಳಾದ 29 ಮತ್ತು 105 ಇವುಗಳನ್ನು ಆಧರಿಸಿರುವ, ಮಕ್ಕಳು ಮತ್ತು ದುರ್ಬಲರಾಗಿರುವ ವಯಸ್ಕರ ರಕ್ಷಣೆಯಲ್ಲಿ ಪರಿಣತಿ ಹೊಂದಿರುವ ಏಜೆನ್ಸಿಗಳ ಜೊತೆ ಮೈತ್ರಿ ರಚಿಸಿಕೊಳ್ಳುವುದು.
- ನ್ಯಾಯೋಚಿತ ವಹಿವಾಟು ಉತ್ಪಾದನೆ ಅಥವಾ ಪ್ರಕ್ರಿಯೆಯ ಪ್ರದೇಶದ ಒಳಗೆ ನಮ್ಮ ಗಮನಕ್ಕೆ ಬರುವ ಯಾವುದೇ ಮಕ್ಕಳ ಅಥವಾ ದುರ್ಬಲರಾಗಿರುವ ವಯಸ್ಕರ ಮೇಲಿನ ಯಾವುದೇ ನಿಂದನೆ ಅಥವಾ ಶೋಷಣೆಯ ಕೃತ್ಯಕ್ಕೆ ಸಂಬಂಧಿಸಿ, ಅತ್ಯುನ್ನತ ಮಟ್ಟದ ಗೌಪ್ಯತೆಯನ್ನು ಕಾಯ್ದುಕೊಳ್ಳುವುದನ್ನು ಖಚಿತಪಡಿಸುವುದರೊಂದಿಗೆ, ಸಂಬಂಧಪಟ್ಟ ರಾಷ್ಟ್ರೀಯ ರಕ್ಷಣಾ ಸಂಸ್ಥೆಗಳಿಗೆ ಮಾಹಿತಿ ನೀಡುವುದಕ್ಕೂ ನಾವು ಬದ್ಧರಾಗಿದ್ದೇವೆ. ನಮ್ಮ ನಿರ್ಣಯಗಳು ಮತ್ತು ಕಾರ್ಯಗಳು "ಮಕ್ಕಳು ಮತ್ತು ದುರ್ಬಲರಾಗಿರುವ ವಯಸ್ಕರ ಅತ್ಯುತ್ತಮ ಹಿತಾಸಕ್ತಿಗಳ" ಸಿದ್ಧಾಂತದಿಂದ ಮಾರ್ಗದರ್ಶಿತವಾಗಿರುತ್ತದೆ, ಹಾಗೂ ಇದೇ ವೇಳೆ ಅವರ ಸಮಗ್ರತೆಯನ್ನು ಯಾವಾಗಲೂ ರಕ್ಷಿಸುತ್ತದೆ.

**E: ಕಾರ್ಯವಿಧಾನಗಳು:**

ಸಿಬ್ಬಂದಿಗಳು ಹಾಗೂ ನಿರ್ದೇಶಕರ ಮಂಡಳಿ, ಆಯೋಗಗಳು ಮತ್ತು ಸಂಸ್ಥೆಯನ್ನು ಪ್ರತಿನಿಧಿಸುತ್ತಿರುವ ಮತ್ತು/ಅಥವಾ ಸಂಸ್ಥೆಗೆ ಸಂಬಂಧಿಸಿರುವ ವ್ಯಕ್ತಿಗಳು ಮತ್ತು/ಅಥವಾ ಸಂಘಟನೆಗಳು ಈ ಕೆಳಗಿನವುಗಳನ್ನು ಅರ್ಥಮಾಡಿಕೊಂಡಿವೆ ಮತ್ತು

ಬದ್ಧತೆ ಹೊಂದಿವೆ ಎನ್ನುವುದರ ಬಗ್ಗೆ ಭರವಸೆ ನೀಡುವುದು ಈ ಕಾರ್ಯವಿಧಾನಗಳ ಉದ್ದೇಶವಾಗಿದೆ:

- ಮಾನವ ಹಕ್ಕುಗಳ ದೃಷ್ಟಿಕೋನದಿಂದ ಜೀತ, ಮಾನವ ಕಳ್ಳಸಾಗಾಣಿಕೆ, ಸಾಲಕ್ಕಾಗಿನ ಜೀತದಂಥ ಅತ್ಯಂತ ಕೆಟ್ಟ ನಮೂನೆಯ ಬಾಲ ಕಾರ್ಮಿಕ ಪದ್ಧತಿ ಮತ್ತು ಶಸ್ತ್ರಾಸ್ತ್ರ ಸಂಘರ್ಷದಲ್ಲಿ ಮಕ್ಕಳ ಬಲವಂತದ ನಿಯೋಜನೆ, ವಾಣಿಜ್ಯಾತ್ಮಕ ಲೈಂಗಿಕ ಶೋಷಣೆ ಮತ್ತು ಅಶ್ಲೀಲಚಿತ್ರಗಳಲ್ಲಿ ಬಳಕೆ, ಅಥವಾ ಕಾನೂನುಬಾಹಿರ ಚಟುವಟಿಕೆಗಳಂಥ ಇತರ ನಮೂನೆಗಳ ಶೋಷಣೆಯ ಕೆಲಸಗಳನ್ನು ಅರ್ಥಮಾಡಿಕೊಂಡಿವೆ.

- ಮಕ್ಕಳು ಮತ್ತು ದುರ್ಬಲರಾಗಿರುವ ವಯಸ್ಕರ ರಕ್ಷಣೆಯ ಕುರಿತ ನಿರೀಕ್ಷೆಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡಿವೆ, ಹಾಗೂ **ಅನುಬಂಧ A** ಯಲ್ಲಿ ವಿವರಿಸಿರುವಂತೆ, NAPP ಯ ಆಚಾರ ಸಂಹಿತೆಯನ್ನು ಗೌರವಿಸುತ್ತವೆ

- ಮಕ್ಕಳು ಮತ್ತು ದುರ್ಬಲರಾಗಿರುವ ವಯಸ್ಕರ ರಕ್ಷಣೆಗಾಗಿನ NAPP ಯ ನೀತಿ ಮತ್ತು ಕಾರ್ಯವಿಧಾನಗಳನ್ನು ಅರ್ಥಮಾಡಿಕೊಂಡಿವೆ ಮತ್ತು ಸಮರ್ಥಿಸುತ್ತವೆ, ಹಾಗೂ
ಅನುಬಂಧ B ಯಲ್ಲಿ ಒದಗಿಸಿರುವ ನಿರ್ದಿಷ್ಟ ನಮೂನೆಗೆ ಸಹಿ ಹಾಕುವ ಮೂಲಕ ಅದನ್ನು ದೃಢೀಕರಿಸುತ್ತವೆ.

- ಈ ಹಿಂಸೆ, ಶೋಷಣೆ ಮತ್ತು ನಿಂದನೆಯ ಪ್ರಕರಣ ಅಥವಾ ಆರೋಪಗಳನ್ನು ಎಲ್ಲಿ ಸುರಕ್ಷಿತವಾಗಿ ವರದಿ ಮಾಡಬೇಕು ಎನ್ನುವುದನ್ನು, ಮತ್ತು ಮಕ್ಕಳು ಹಾಗೂ ದುರ್ಬಲರಾಗಿರುವ ವಯಸ್ಕರನ್ನು ರಕ್ಷಿಸಲು ಸುರಕ್ಷಿತ ಕ್ರಮ ಕೈಗೊಳ್ಳುವುದಕ್ಕೆ ವ್ಯಕ್ತಿಯಾಗಿ ಅನುಸರಿಸಬೇಕಾದ ಕ್ರಮಗಳನ್ನು ತಿಳಿದಿವೆ.

ಈ ತಿಳುವಳಿಕೆಗಳೊಂದಿಗೆ, NAPP ಯ ಸಿಬ್ಬಂದಿ ಮತ್ತು ನಿರ್ದೇಶಕರ ಮಂಡಳಿ ಮತ್ತು ಆಯೋಗಗಳು:

- ಅನ್ವಯವಾಗುವ NAPP ಯ ಕಾರ್ಯವಿಧಾನಗಳ ಅನುಸಾರ ಮತ್ತು ಅನುಬಂಧ C ಯಲ್ಲಿ ನೀಡಿರುವ ವರದಿ ನಮೂನೆಯನ್ನು ಬಳಸಿಕೊಂಡು, ಮಕ್ಕಳು ಅಥವಾ ದುರ್ಬಲರಾಗಿರುವ ವಯಸ್ಕರ ನಿಂದನೆ ಅಥವಾ ಶೋಷಣೆಗೆ ಸಂಬಂಧಿಸಿ ವಿಶ್ವಾಸಾರ್ಹ ಮಾಹಿತಿ ತಿಳಿದುಬಂದಿರುವ ಯಾವುದೇ ಪ್ರಕರಣಗಳನ್ನು ತಕ್ಷಣವೇ ಸಿಇಒಗೆ ಅಥವಾ ಆತನ/ ಆಕೆಯ ಮುಖ್ಯಸ್ಥರಿಗೆ ವರದಿ ಮಾಡುತ್ತಾರೆ.

  ಆರೋಪಗಳು ಮತ್ತು ಪ್ರಕರಣಗಳ ಬಗ್ಗೆ ಪೀಠಕ್ಕೆ ಮಾಹಿತಿ ನೀಡಲಾಗುತ್ತದೆ ಮತ್ತು ಪೀಡಿತವಾದ ಮಗು ಅಥವಾ ದುರ್ಬಲರಾಗಿರುವ ವಯಸ್ಕರನ್ನು ರಕ್ಷಿಸಲು ಶಿಫಾರಸು ಮಾಡಲಾದ ಒಟ್ಟಾರೆ ಕ್ರಮಗಳ ಬಗ್ಗೆ ನಿರ್ಧಾರ ಕೈಗೊಳ್ಳಲು ಸಿಇಒ ಮತ್ತು ಆತನ/ ಆಕೆಯ ಮುಖ್ಯಸ್ಥರೊಂದಿಗೆ ಕೆಲಸ ಮಾಡುತ್ತಾರೆ. ಮಕ್ಕಳ ಮತ್ತು ದುರ್ಬಲರಾಗಿರುವ ವಯಸ್ಕರ ಹಕ್ಕುಗಳಿಗೆ ಸಂಬಂಧಿಸಿ ಪರಿಣತಿ ಹೊಂದಿರುವ ಸಂಘಟನೆಗಳ ಅನುಸಾರ ಗುರುತಿಸಲ್ಪಟ್ಟಿರುವ, ಮಕ್ಕಳ ಅಥವಾ ದುರ್ಬಲರಾಗಿರುವ ವಯಸ್ಕರ ಅತ್ಯುತ್ತಮ ಹಿತಾಸಕ್ತಿಗಳ ಆಧಾರದಲ್ಲಿ ಕ್ರಮ ಕೈಗೊಳ್ಳುವುದಕ್ಕಾಗಿ ನಿರ್ಧಾರಗಳನ್ನು ಜಾರಿ ಮಾಡಲು ಸಿಇಒ ಅಥವಾ ಆಕೆಯ/ ಆತನ ಮುಖ್ಯಸ್ಥರು ಜವಾಬ್ದಾರರಾಗಿರುತ್ತಾರೆ. ಮಕ್ಕಳ ಮತ್ತು ದುರ್ಬಲರಾಗಿರುವ ವಯಸ್ಕರ ಸುದೀರ್ಘ ಯೋಗಕ್ಷೇಮವನ್ನು ಖಚಿತಪಡಿಸುವ, ಮಕ್ಕಳು ಮತ್ತು ದುರ್ಬಲರಾಗಿರುವ ವಯಸ್ಕರ ರಾಷ್ಟ್ರೀಯ ರಕ್ಷಣೆಗೆ ಹೊಣೆಗಾರನಾಗಿರುವ ರಕ್ಷಣಾ ಏಜೆನ್ಸಿಗೆ ಅಥವಾ ಏಜೆಂಟರಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಪ್ರಕರಣದ ಬಗ್ಗೆ ವರದಿ ಮಾಡುವುದನ್ನು ಇದು ಸೂಚಿಸಬಹುದು.

- ಅನ್ವಯವಾಗುವ NAPP ಯ ಕಾರ್ಯವಿಧಾನಗಳ ಅನುಸಾರ, ಮಕ್ಕಳು ಅಥವಾ ದುರ್ಬಲರಾಗಿರುವ ವಯಸ್ಕರ ಸಂಭಾವ್ಯ ನಿಂದನೆ ಅಥವಾ ಶೋಷಣೆಯ ಕುರಿತ ವಿಶ್ವಾಸಾರ್ಹ ಮಾಹಿತಿಗೆ ಪ್ರತಿಕ್ರಿಯಿಸಬೇಕು, ಮತ್ತು
ನಮ್ಮ ಕಾರ್ಯಗಳ ಮೂಲಕ ನಾವು ಅವರಿಗೆ ಇನ್ನಷ್ಟು ಹಾನಿ ಉಂಟುಮಾಡುವುದಿಲ್ಲ ಎನ್ನುವುದನ್ನು

ಖಚಿತಪಡಿಸಿಕೊಳ್ಳುವುದರೊಂದಿಗೆ, ಮಕ್ಕಳು ಮತ್ತು ದುರ್ಬಲರಾಗಿರುವ ವಯಸ್ಕರ ಅತ್ಯುತ್ತಮ ಹಿತಾಸಕ್ತಿಗಳನ್ನು ಯಾವಾಗಲೂ ಗೌರವಿಸುತ್ತ, ಪ್ರಕರಣದ ವರದಿ ಮಾಡುವಿಕೆಗಾಗಿ ಕ್ರಮಗಳನ್ನು ಕೈಗೊಳ್ಳಬೇಕು.

- ಸಿಇಒ ಅಥವಾ ಆತನ/ ಆಕೆಯ ಮುಖ್ಯಸ್ಥರು ಮನವಿ ಮಾಡಿದಾಗ, ಮಕ್ಕಳು ಮತ್ತು ದುರ್ಬಲರಾಗಿರುವ ವಯಸ್ಕರ ನಿಂದನೆ ಅಥವಾ ಶೋಷಣೆಯ ಯಾವುದೇ ತನಿಖೆಗೆ ಪೂರ್ಣವಾಗಿ ಮತ್ತು ಗೌಪ್ಯವಾಗಿ ಸಹಕರಿಸಬೇಕು. ಸಿಇಒ ಅಥವಾ ಆಕೆಯ/ ಆತನ ಮುಖ್ಯಸ್ಥರ ನಿರ್ದಿಷ್ಟ ಸೂಚನೆ ಪಡೆಯದೆ ಯಾವುದೇ ವ್ಯಕ್ತಿ (NAPP ಯ ಉದ್ಯೋಗಿ, ಗುತ್ತಿಗೆ ಕಾರ್ಮಿಕ ಅಥವಾ ಪ್ರತಿನಿಧಿ) ತನಿಖೆ ನಡೆಸುವಂತಿಲ್ಲ ಅಥವಾ ಹೆಚ್ಚುವರಿ ಮಾಹಿತಿಯನ್ನು ಪಡೆಯುವಂತಿಲ್ಲ.

- ವಿಶೇಷವಾಗಿ ಮಕ್ಕಳನ್ನು ಗೌರವಿಸಲಾಗುವ ಮತ್ತು ಅವರ ಆತಂಕಗಳು ಮತ್ತು ಅವರ ಹಕ್ಕುಗಳ ಬಗ್ಗೆ ದನಿಎತ್ತಲು ಉತ್ತೇಜನ ನೀಡಲಾಗುವ ವಾತಾವರಣವನ್ನು ರಚಿಸಲು ಕೊಡುಗೆ ನೀಡಬೇಕು.

- ಮಕ್ಕಳ ಫೊಟೊ ಅಥವಾ ವೀಡಿಯೋ ತೆಗೆದುಕೊಳ್ಳುವುದಕ್ಕೆ ಮುಂಚೆ ಅಥವಾ ಅವರ ಸಂದರ್ಶನ ಮಾಡುವುದಕ್ಕೆ ಮುಂಚೆ ಯಾವಾಗಲೂ ಅವರಿಂದ (ಒಂದು ದೃಢೀಕರಣಕ್ಕೆ ಸಹಿ ಹಾಕಲು ಅವರ ಹೆತ್ತವರು ಅಥವಾ ಪೋಷಕರನ್ನು ಕೇಳಿ) ಅನುಮತಿ ಪಡೆದುಕೊಳ್ಳಿ. ಇವುಗಳಲ್ಲಿ ಯಾವುದಕ್ಕಾದರೂ ಅವರು "ಬೇಡ" ಅಂದಾಗ ಅವರ ನಿರ್ಧಾರವನ್ನು ಗೌರವಿಸಿ. ಮಕ್ಕಳ ಕುರಿತ ಲೇಖನಗಳು ಮತ್ತು ಚಿತ್ರಗಳು ಅವರ ಅತ್ಯುತ್ತಮ ಹಿತಾಸಕ್ತಿಯನ್ನು ಆಧರಿಸಿರಬೇಕು. ಲಿಂಗ ಆಧರಿತ ಹಿಂಸೆ ಸೇರಿದಂತೆ, ಬಾಲ ಕಾರ್ಮಿಕ ಪದ್ಧತಿ ಅಥವಾ ಶೋಷಣೆಯ ಮೂಲಕ ಕೆಲಸದಲ್ಲಿ ತೊಡಗಿರುವ ಯಾವುದೇ ಮಗು ಅಥವಾ ದುರ್ಬಲರಾಗಿರುವ ವಯಸ್ಕರ ಫೊಟೊ ತೆಗೆಯಬಾರದು; ಅವರ ದುರ್ಬಲ ಪರಿಸ್ಥಿತಿ ಸಮ್ಮತಿಗೆ ಅವಕಾಶ ನೀಡುವುದಿಲ್ಲವಾದ್ದರಿಂದ ಫೊಟೊ ತೆಗೆಯಲು ಅವರು ನೀಡಿರುವ ಸಮ್ಮತಿಯನ್ನು ನಿರ್ಲಕ್ಷಿಸಬೇಕು. ಎಲ್ಲ ವಿಷಯಗಳಲ್ಲೂ ರಕ್ಷಣೆಯು ಆದ್ಯತೆಯಾಗಿರುತ್ತದೆ.

- ಮಕ್ಕಳು ಮತ್ತು ದುರ್ಬಲರಾಗಿರುವ ವಯಸ್ಕರಿಗೆ ಸಂಬಧಿಸಿ, ಮತ್ತು/ಅಥವಾ ರಕ್ಷಣಾ ನೀತಿಯ ಅನುಸರಣೆ ಮಾಡದಿರುವ ಸಂದರ್ಭದಲ್ಲಿ, NAPP ಸಿಬ್ಬಂದಿ, NAPP ಯ ನಿರ್ದೇಶಕರ ಮಂಡಳಿ ಅಥವಾ ಸಮಿತಿಗಳು ಅಥವಾ ಸಂಸ್ಥೆಯನ್ನು ಪ್ರತಿನಿಧಿಸುತ್ತಿರುವ ಇತರ ಯಾವುದೇ ವ್ಯಕ್ತಿಯ ನಡವಳಿಕೆಗೆ ಸಂಬಂಧಿಸಿ ಒಂದು ವೇಳೆ ಮಾಹಿತಿ ಇದ್ದಲ್ಲಿ ಗಮನಕ್ಕೆ ತನ್ನಿ, ಅದನ್ನು NAPP ಯ ತರಬೇತಾದ ಸಿಇಒ ಅಥವಾ ನಿಯೋಜಿತರಿಂದ ಮತ್ತು/ಅಥವಾ ಕಾನೂನಿನ ಅನುಸಾರ ತನಿಖೆಗಾಗಿ ಸಂಬಂಧಪಟ್ಟ ಅಧಿಕಾರಿಗಳು ನೀಡಿದ ದೂರಿನ ಮೇರೆಗೆ ಸುರಕ್ಷಿತವಾಗಿ ವರದಿ ಮಾಡಲಾಗುತ್ತದೆ ಮತ್ತು ತನಿಖೆ ನಡೆಸಲಾಗುತ್ತದೆ. ಒಂದು ವೇಳೆ ಸಿಇಒ ಅಥವಾ ನಿಯೋಜಿತರ ವಿರುದ್ಧ ಆರೋಪ ಅಥವಾ ವರದಿಯನ್ನು ಮಾಡಬೇಕಿದ್ದರೆ, ಮೇಲಿನ ಹಂತದ ಮ್ಯಾನೇಜ್‌ಮೆಂಟ್ ಮತ್ತು/ಅಥ NAPP ಮಂಡಳಿಯ ಅಧ್ಯಕ್ಷರಿಗೆ ವರದಿ ಮಾಡುವ ಮೂಲಕ ಹಿತಾಸಕ್ತಿ ಸಂಘರ್ಷವನ್ನು ತಪ್ಪಿಸಲಾಗುತ್ತದೆ.

- ಮಕ್ಕಳು ಮತ್ತು ದುರ್ಬಲರಾಗಿರುವ ವಯಸ್ಕರ ರಕ್ಷಣೆಗಾಗಿನ ನೀತಿಯಲ್ಲಿನ ಈ ಕಾರ್ಯವಿಧಾನಗಳನ್ನು ತಿಳಿದುಕೊಳ್ಳಿ, ಮತ್ತು ಬಾಲ ಕಾರ್ಮಿಕ ಪದ್ಧತಿ ಮತ್ತು ಶೋಷಣೆಯ ಮೂಲಕ ಕೆಲಸದ ಬಗ್ಗೆ, ನಿರ್ದಿಷ್ಟವಾಗಿ ಪ್ರಸ್ತುತ ನೀತಿಯಲ್ಲಿ ಸೂಚಿಸಿರುವಂತೆ, ರಕ್ಷಣೆಯ ದೃಷ್ಟಿಕೋನದಿಂದ ಮಗು/ದುರ್ಬಲರಾಗಿರುವ ವಯಸ್ಕರಿಂದ ಪ್ರತಿಕ್ರಿಯೆಯ ಅಗತ್ಯವಿರಬಹುದಾದ ಆಯಾಮಗಳಿಗೆ ಸಂಬಂಧಿಸಿ Fairtrade ಮಾನದಂಡಗಳ ಬಗ್ಗೆ ಸ್ಪಷ್ಟವಾದ ತಿಳುವಳಿಕೆಯನ್ನು ಪಡೆದುಕೊಳ್ಳಿ.

FAIRTRADE
NETWORK OF ASIA & PACIFIC PRODUCERS

**F: ಸಂವಹನ ಕಾರ್ಯವಿಧಾನಗಳು:**

- ಮಕ್ಕಳು ಮತ್ತು ದುರ್ಬಲರಾಗಿರುವ ವಯಸ್ಕರ ರಕ್ಷಣೆಯ ವಿಷಯಕ್ಕೆ ಸಂಬಂಧಿಸಿದ ಎಲ್ಲ ಮಾಹಿತಿ NAPP ಯ ಸವಲತ್ತಿನ ಮಾಹಿತಿಯಾಗಿರುತ್ತದೆ, ಮತ್ತು ಹಾಗಾಗಿ, ಈ ಮಾಹಿತಿಯನ್ನು ಆಂತರಿಕವಾಗಿ ಮತ್ತು ಹೊರಗಡೆ ಸಂವಹನ ಮಾಡುವುದಕ್ಕೆ ಕಠಿಣ ಕಾರ್ಯವಿಧಾನಗಳನ್ನು ಅನುಸರಿಸಬೇಕು, ಇದರಲ್ಲಿ ಸಂಸ್ಥೆಯ ಕಾನೂನು ಪ್ರತಿನಿಧಿ ಅಗತ್ಯ ಎಂದು ಪರಿಗಣಿಸುವ ರೀತಿಯಲ್ಲಿ, NAPP ಯಡಿ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳು ಮತ್ತು/ಅಥವಾ ವ್ಯಕ್ತಿಗಳು ಗೌಪ್ಯತೆಗೆ ಸಂಬಂಧಿಸಿದ ಹೆಚ್ಚುವರಿ ಒಪ್ಪಂದಗಳಿಗೆ ಸಹಿ ಹಾಕುವುದು ಅಗತ್ಯವಾಗಿರುತ್ತದೆ. ಇದನ್ನು ಪ್ರತಿ ಪ್ರಕರಣದ ಆಧಾರದಲ್ಲಿ ನಿರ್ಧರಿಸಲಾಗುತ್ತದೆ.

- ಮಕ್ಕಳು ಮತ್ತು ದುರ್ಬಲರಾಗಿರುವ ವಯಸ್ಕರ ರಕ್ಷಣೆಯ ವಿಷಯಕ್ಕೆ ಸಂಬಂಧಿಸಿದ ಎಲ್ಲ ಮಾಹಿತಿ ಸ್ವರೂಪದಲ್ಲಿ ಸೂಕ್ಷ್ಮವಾಗಿರುತ್ತದೆ, ಮತ್ತು ಈ ಮಾಹಿತಿಯನ್ನು ಸಂವಹನ ಮಾಡುವಾಗ ಸೂಕ್ತ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುವುದು ಅಗತ್ಯ. ಮಕ್ಕಳ ರಕ್ಷಣೆಗೆ ಸಂಬಂಧಿಸಿದ ಮಾಹಿತಿಯನ್ನು ಕೇವಲ ನಿಯೋಜಿತ ಸ್ವೀಕೃತಿದಾರರು ಮಾತ್ರ ಸ್ವೀಕರಿಸುತ್ತಾರೆ ಮತ್ತು ಅವುಗಳಿಗೆ ಪ್ರವೇಶ ಹೊಂದಿರುತ್ತಾರೆ ಎನ್ನುವುದನ್ನು ಖಚಿತಪಡಿಸಿಕೊಳ್ಳುವುದು ಮಾಹಿತಿ ನೀಡುವವರು ಮತ್ತು ಸ್ವೀಕರಿಸುವವರು ಇಬ್ಬರದೂ ಹೊಣೆಗಾರಿಕೆಯಾಗಿರುತ್ತದೆ. ಆದ್ದರಿಂದ, ಇದಕ್ಕೆ ಸಂಬಂಧಿಸಿದ ಯಾವುದೇ ಸಂವಹನದ ಇ-ಮೇಲ್‌ನ "ಸಬ್ಜೆಕ್ಟ್"ನಲ್ಲಿ, ಹಾಗೂ ಇ-ಮೇಲ್ ಸಂದೇಶದ ಬರಹದಲ್ಲಿ ಮತ್ತು ಲಗತ್ತಿಸಿದ ದಾಖಲೆಗಳಲ್ಲಿ **ಗೌಪ್ಯ** ಎಂದು ನಮೂದಿಸಬೇಕು.

  ಮಾಹಿತಿ ಬಿಡುಗಡೆ ಮಾಡುವ ಅಥವಾ ತೆಗೆದುಕೊಳ್ಳಬೇಕಾದ ಕ್ರಮವನ್ನು ನಿರ್ಧರಿಸುವ ವ್ಯಕ್ತಿಯು ಇದರಿಂದ ಮಕ್ಕಳು ಅಥವಾ ದುರ್ಬಲರಾಗಿರುವ ವಯಸ್ಕರ ಅತ್ಯುತ್ತಮ ಹಿತಾಸಕ್ತಿಗಳನ್ನು ಸಾಧಿಸಬಹುದು ಎಂದು ಭಾವಿಸಿದರೂ ಸಹ, ಮಕ್ಕಳು ಅಥವಾ ದುರ್ಬಲರಾಗಿರುವ ವಯಸ್ಕರ ರಕ್ಷಣೆ ಕುರಿತ ಮಾಹಿತಿ ಅಥವಾ ಕ್ರಮವನ್ನು ಇನ್ನೊಂದು ಸಂಸ್ಥೆ ಅಥವಾ ವ್ಯಕ್ತಿಗೆ ಬಹಿರಂಗಪಡಿಸಬಹುದೇ, ಅಥವಾ ತೆಗೆದುಕೊಳ್ಳಬಹುದೇ ಎನ್ನುವ ಬಗ್ಗೆ ವ್ಯಕ್ತಿ ಯಾವುದೇ ಸಂದರ್ಭದಲ್ಲಿ ಸ್ವಂತವಾಗಿ ನಿರ್ಧಾರ ಮಾಡುವಂತಿಲ್ಲ.

- ರಕ್ಷಣೆಗೆ ಸಂಬಂಧಿಸಿದ ಸವಲತ್ತಿನ ಮಾಹಿತಿ ಹೊಂದಿರುವ ಯಾವುದೇ ವ್ಯಕ್ತಿ, Fairtrade ವ್ಯವಸ್ಥೆಯ ಒಳಗೆ ಅಥವಾ ಹೊರಗೆ ಒಂದು ಸಂಸ್ಥೆಯೊಂದಿಗೆ ಅಂಥ ಮಾಹಿತಿ ಹಂಚಿಕೊಳ್ಳುವುದಕ್ಕೆ ಮೊದಲು ಅದರ ಬಗ್ಗೆ NAPP ಯ ಸಿಇಒ ಅಥವಾ ಆತನ/ ಆಕೆಯ ಮುಖ್ಯಸ್ಥರ ಜೊತೆ ಚರ್ಚಿಸಬೇಕು. ಇದು NAPP ಯ ಸಿಇಒ ಮತ್ತು ಅಧ್ಯಕ್ಷರಿಗೂ ಅನ್ವಯವಾಗುತ್ತದೆ.

- ಲಿಂಗ ಆಧರಿತ ಹಿಂಸೆ ಸೇರಿದಂತೆ, ಬಾಲ ಕಾರ್ಮಿಕ ಪದ್ಧತಿ ಅಥವಾ ಶೋಷಣೆಯ ಮೂಲಕ ಕೆಲಸದ ಅತ್ಯಂತ ಕೆಟ್ಟ ನಮೂನೆಗಳಿಗೆ ಸಂಬಂಧಿಸಿದ ಆರೋಪ ಅಥವಾ ಮಾಹಿತಿಯನ್ನು NAPP ಯ ಸಿಇಒ ಅಥವಾ ಆತನ/ ಆಕೆಯ ಮುಖ್ಯಸ್ಥರು ಸ್ವೀಕರಿಸಿದಾಗ, 15 ಕೆಲಸದ ದಿನಗಳ ಒಳಗೆ ಪ್ರಕರಣವನ್ನು ವರದಿ ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕಾದ ಬದ್ಧತೆಯನ್ನು ಆತ/ಆಕೆ ಹೊಂದಿರುತ್ತಾರೆ.

**ಈ ಮಾನದಂಡಗಳನ್ನು ಇವರು ಅನುಮೋದಿಸಿದ್ದಾರೆ:**
NAPP ಯ ಸಾಮಾನ್ಯ ಸಭೆಯಲ್ಲಿ ಮಾನ್ಯತೆಗಾಗಿ ಮಂಡನೆ ಮಾಡುವ ಬದ್ಧತೆಯೊಂದಿಗೆ
NAPP ಯ ನಿರ್ದೇಶಕರ ಮಂಡಳಿ.

Network of Asia and Pacific Producers – ಆಡಳಿತ ಮಂಡಳಿ ಅಧ್ಯಕ್ಷ ಶ್ರೀ ಜ್ಞಾನಶೇಖರನ್ ರಾಜರತ್ನಂ

FAIRTRADE
NETWORK OF ASIA & PACIFIC PRODUCERS

**ಅನುಬಂಧ A**

## ಮಕ್ಕಳು ಮತ್ತು ದುರ್ಬಲ ವಯಸ್ಕರ ರಕ್ಷಣೆಯ ಕುರಿತ NAPP ಯ ಆಚಾರ ಸಂಹಿತೆ

________________________________ [ಹೆಸರು ಸೇರಿಸಿ], NAPP ಯ ರಕ್ಷಣಾ ನೀತಿಯನ್ನು ನಾನು ಓದಿದ್ದೇನೆ ಮತ್ತು ಅರ್ಥಮಾಡಿಕೊಂಡಿದ್ದೇನೆ, ಹಾಗೂ NAPP ಜೊತೆಗಿರುವ ಅವಧಿಯುದ್ದಕ್ಕೂ ಈ ಕೆಳಗಿನವುಗಳಿಗೆ ಬದ್ಧನಾಗಿರುತ್ತೇನೆ ಎಂದು ನಾನು ಅಂಗೀಕರಿಸುತ್ತೇನೆ:

> ಜನಾಂಗ, ಬಣ್ಣ, ಲಿಂಗ, ಭಾಷೆ, ಧರ್ಮ, ರಾಜಕೀಯ ಅಥವಾ ಇತರ ಅಭಿಪ್ರಾಯ, ರಾಷ್ಟ್ರೀಯತೆ, ಸಮುದಾಯ ಅಥವಾ ಸಾಮಾಜಿಕ ಮೂಲ, ಸಂಪತ್ತು, ವೈಕಲ್ಯ, ಹುಟ್ಟು ಅಥವಾ ಇತರ ಸ್ಥಿತಿಗಳನ್ನು ಪರಿಗಣಿಸದೆ ಮಕ್ಕಳು ಮತ್ತು/ಅಥವಾ ದುರ್ಬಲರಾಗಿರುವ ವಯಸ್ಕರನ್ನು ಗೌರವದಿಂದ ನಡೆಸಿಕೊಳ್ಳುತ್ತೇನೆ

> ಅನುಚಿತ, ಕಿರುಕುಳದ, ನಿಂದನೆಯ, ಲೈಂಗಿಕವಾಗಿ ಪ್ರಚೋದನಕಾರಿಯಾದ, ಕೀಳಾದ ಅಥವಾ ಸಾಂಸ್ಕೃತಿಕವಾಗಿ ಅನುಚಿತವಾದ ಭಾಷೆ ಅಥವಾ ನಡವಳಿಕೆಯನ್ನು ಮಕ್ಕಳು ಅಥವಾ ವಯಸ್ಕರ ವಿರುದ್ಧ ಬಳಸುವುದಿಲ್ಲ

> ಲೈಂಗಿಕ ಸೇವೆ ಅಥವಾ ನಟನೆಗಾಗಿ ಪಾವತಿ ಮಾಡುವುದು ಸೇರಿದಂತೆ, ಯಾವುದೇ ಬಗೆಯ ಲೈಂಗಿಕ ಸಂಭೋಗ ಅಥವಾ ಲೈಂಗಿಕ ಚಟುವಟಿಕೆಯಲ್ಲಿ 18 ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ತೊಡಗಿಸುವುದಿಲ್ಲ

> NAPP ಉತ್ಪಾದಕ ಸಂಸ್ಥೆಗಳು ಅಥವಾ ಪಾಲುದಾರ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ 18 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಯಾವುದೇ ವ್ಯಕ್ತಿಯೊಂದಿಗೆ ಯಾವುದೇ ಬಗೆಯ ಲೈಂಗಿಕ ಕಿರುಕುಳ ಅಥವಾ ಸಂಬಂಧಿತ ದುರ್ನಡತೆಗಳಲ್ಲಿ ತೊಡಗುವುದಿಲ್ಲ

> ಮಕ್ಕಳು ಮತ್ತು ದುರ್ಬಲರಾಗಿರುವ ವಯಸ್ಕರ ಸಮೀಪದಲ್ಲಿ ಕೆಲಸ ಮಾಡುವ ಸಂದರ್ಭ ಸಾಧ್ಯವಿದ್ದಾಗಲೆಲ್ಲ, ಇನ್ನೊಬ್ಬ ವಯಸ್ಕರು ಇರುವುದನ್ನು ಖಚಿತಪಡಿಸಿಕೊಳ್ಳುತ್ತೇನೆ,

> ಗಾಯಗೊಳ್ಳುವ ಅಥವಾ ದೈಹಿಕವಾಗಿ ಅಪಾಯಕ್ಕೀಡಾಗುವ ತಕ್ಷಣದ ಅಪಾಯದಲ್ಲಿ ಇಲ್ಲದ ಹೊರತು ಒಬ್ಬಂಟಿ ಮಕ್ಕಳನ್ನು ನನ್ನ ಮನೆಗೆ ಆಹ್ವಾನಿಸುವುದಿಲ್ಲ, ಅಂಥ ಸಂದರ್ಭಗಳಲ್ಲಿ ಸೂಪರ್‌ವೈಸರ್‌ನಿಂದ ಅನುಮತಿ ಪಡೆದುಕೊಳ್ಳಬೇಕು ಮತ್ತು ಇನ್ನೊಬ್ಬ ವಯಸ್ಕರು ಉಪಸ್ಥಿತರಿರಬೇಕು.

> ಮೇಲ್ವಿಚಾರಣೆಯಿಲ್ಲದ ಮಕ್ಕಳ ಸಮೀಪದಲ್ಲಿ ಮಲಗುವುದಿಲ್ಲ.

> ಯಾವುದೇ ಕಂಪ್ಯೂಟರ್‌ಗಳು, ಮೊಬೈಲ್ ಫೋನ್‌ಗಳು, ವೀಡಿಯೋ ಕ್ಯಾಮರಾಗಳು, ಕ್ಯಾಮರಾಗಳು ಅಥವಾ ಸಾಮಾಜಿಕ ಮಾಧ್ಯಮಗಳನ್ನು ಅನುಚಿತವಾಗಿ ಬಳಸುವುದಿಲ್ಲ, ಮತ್ತು ಮಕ್ಕಳು ಮತ್ತು ದುರ್ಬಲರಾಗಿರುವ ವಯಸ್ಕರನ್ನು ಶೋಷಣೆ ಮಾಡಲು ಯಾವುದೇ ಶೋಷಣಾತ್ಮಕ ಸಾಮಗ್ರಿಯನ್ನು ಯಾವುದೇ ಮಾಧ್ಯಮದ ಮೂಲಕ ಪ್ರವೇಶಿಸುವುದಿಲ್ಲ.

> ಮಕ್ಕಳಿಗೆ ದೈಹಿಕ ಶಿಕ್ಷೆ ನೀಡುವುದಿಲ್ಲ

> ಮಕ್ಕಳ ವಯಸ್ಸು ಅಥವಾ ಬೆಳವಣಿಗೆ ಹಂತಕ್ಕೆ ಅನುಸಾರವಾಗಿ ಅನುಚಿತವಾಗಿರುವ, ಶಿಕ್ಷಣಕ್ಕಾಗಿ ಮತ್ತು ಪಠ್ಯೇತರ ಚಟುವಟಿಕೆಗಾಗಿ ಅವರಿಗೆ ಲಭ್ಯವಿರುವ ಸಮಯದಲ್ಲಿ ಅಡಚಣೆ ಉಂಟುಮಾಡುವ, ಅಥವಾ ಅವರನ್ನು ಗಮನಾರ್ಹ ಅಪಾಯಕ್ಕೆ ಈಡುಮಾಡಬಹುದಾದ ಯಾವುದೇ ಮನೆಕೆಲಸ ಅಥವಾ ಇತರ ಕೆಲಸಗಳಲ್ಲಿ ಮಕ್ಕಳನ್ನು ನೇಮಕ ಮಾಡಿಕೊಳ್ಳುವುದಿಲ್ಲ

> ಬಾಲ ಕಾರ್ಮಿಕ ಪದ್ಧತಿ ಮತ್ತು ಶೋಷಣೆಯ ಮೂಲಕ ಕೆಲಸಕ್ಕೆ ಸಂಬಂಧಿಸಿದ ಕಾರ್ಮಿಕ ಕಾನೂನುಗಳು ಸೇರಿದಂರೆ, ಲಿಂಗ ಆಧರಿತ ಹಿಂಸೆ ಸೇರಿದಂತೆ ಎಲ್ಲ ಸ್ಥಳೀಯ ಕಾನೂನುಗಳ ಪಾಲನೆ ಮಾಡುತ್ತೇನೆ.

> NAPP ರಕ್ಷಣಾ ನೀತಿಯಲ್ಲಿ ನಿಗದಿಪಡಿಸಿರುವ, ಸೂಕ್ತ ಕಾರ್ಯವಿಧಾನಗಳ ಅನುಸಾರ, ಆತಂಕಗಳು ಅಥವಾ ಶೋಷಣೆ ಮತ್ತು ನಿಂದನೆಯ ಆರೋಪಗಳು ಮತ್ತು ನೀತಿಯ ಅನುಸರಣೆ ಮಾಡದಿರುವಿಕೆಯನ್ನು ತಕ್ಷಣವೇ ವರದಿ ಮಾಡುತ್ತೇನೆ

> ಈ ಹಿಂದೆ ಸಂಭವಿಸಿರುವ ಅಥವಾ NAPP ಜೊತೆಗಿನ ನನ್ನ ಸಹಭಾಗಿತ್ವದ ಸಂದರ್ಭ ಸಂಭವಿಸಿರುವ ಶೋಷಣೆ ಮತ್ತು ನಿಂದನೆಗೆ ಸಂಬಂಧಿಸಿದ ಎಲ್ಲ ಆರೋಪಗಳು, ತೀರ್ಪುಗಳು ಮತ್ತು ಅಪರಾಧಗಳ ಇತರ ಫಲಿತಾಂಶಗಳನ್ನು ತಕ್ಷಣವೇ ಬಹಿರಂಗಪಡಿಸುತ್ತೇನೆ

ಈ ಆಚಾರ ಸಂಹಿತೆಯ ಯಾವುದೇ ಉಲ್ಲಂಘನೆಯನ್ನು, ಸೂಕ್ತ ಕಾರ್ಯವಿಧಾನಗಳ ಅನುಸಾರ ತಕ್ಷಣವೇ ವರದಿ ಮಾಡಬೇಕು, ಮತ್ತು ಅದು NAPP ಜೊತೆಗಿನ ಉದ್ಯೋಗದಿಂದ ಅಮಾನತು ಅಥವಾ ವಜಾಗೊಳ್ಳಬಹುದಾದ ಸಂಭವನೀಯತೆಯನ್ನು ಹೊಂದಿರುತ್ತದೆ ಎನ್ನುವುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ.

ಸಹಿ: ದಿನಾಂಕ: **17ನೇ ಜನವರಿ 2020**

**ಅಧ್ಯಕ್ಷರು:** ಶ್ರೀ ಜ್ಞಾನಶೇಖರನ್ ರಾಜರತ್ನಂ
**ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ:** ಶ್ರೀ ಸಂಜೀತ್ ಸಿಂಗ್ ಖುರಾನಾ

**ಅನುಬಂಧ B**

**ಬದ್ಧತೆಯ ಘೋಷಣೆ**

ನಾನು __________________________ NAPP ಯ ಮಕ್ಕಳ ಮತ್ತು ದುರ್ಬಲರಾಗಿರುವ ವಯಸ್ಕರ ರಕ್ಷಣೆಯ ನೀತಿಯ ಅನುಸರಣೆಯಲ್ಲಿದ್ದೇನೆ ಮತ್ತು ಅದನ್ನು ಪಾಲಿಸಲು ಬದ್ಧನಾಗಿದ್ದೇನೆ.

ಸಹಿ: ದಿನಾಂಕ:

ಹೆಸರು :

ಹುದ್ದೆ :

FAIRTRADE
NETWORK OF ASIA & PACIFIC PRODUCERS

| **ಅನುಬಂಧ C ರಕ್ಷಣಾ ವರದಿ ನಮೂನೆ[2]** |
|---|

*ಅನುಬಂಧ C ರಕ್ಷಣಾ ವರದಿ ನಮೂನೆ*
**ಆರಂಭಿಕ ವರದಿ**

**ಗೌಪ್ಯ -**
**ಈ ಕೆಳಗಿನವುಗಳನ್ನು ಕೇವಲ 'ತಿಳಿದುಕೊಳ್ಳುವ ಅಗತ್ಯವಿದೆ' ಆಧಾರದಲ್ಲಿ ಮಾತ್ರ ಹಂಚಿಕೊಳ್ಳಲಾಗುತ್ತದೆ**

**ಸಾಧ್ಯವಿದ್ದಷ್ಟು ಮಾಹಿತಿಯೊಂದಿಗೆ ನಮೂನೆಯನ್ನು ಭರ್ತಿ ಮಾಡಿ**

**ಏನನ್ನು ವರದಿ ಮಾಡಲಾಗುತ್ತಿದೆ?**
☐ ನಿಂದನೆಯ ಆರೋಪ - ನಿಂದನೆ ನಡೆಯುತ್ತಿರಬಹುದು ಎನ್ನುವ ಸಾಮಾನ್ಯ ಸಂದೇಹ/ ಆತಂಕ
☐ ನಿಂದನೆಯ ಘಟನೆ - ನೈಜ ನಿಂದನೆಯನ್ನು ಕಂಡಿದ್ದೇನೆ
☐ ರಕ್ಷಣೆಯ ದೂರು - ಮಗು ಮತ್ತು/ಅಥವಾ ವಯಸ್ಕರ ಬಹಿರಂಗ

**ವರದಿ ವಿವರಗಳು:**

ಸಮಯ: ___________ ದಿನಾಂಕ: _________ ಸ್ಥಳ: ______________________________.

**ವರದಿಗಾರರ ವಿವರಗಳು:**

ಹೆಸರು: ___________________________________ ರಾಷ್ಟ್ರೀಯತೆ: ____________________
ವಿಳಾಸ/ ಸಂಪರ್ಕ ವಿವರಗಳು:
_____________________________________________________________________
_____________________________________________________________________

ಜನ್ಮ ದಿನಾಂಕ: ______________ ವಯಸ್ಸು: __________ ಲಿಂಗ: _________(ಪುರುಷ/ಮಹಿಳೆ)
ಸಂತ್ರಸ್ತನ ಜೊತೆಗಿನ ಸಂಬಂಧ:
___________________________________________________________
ವೃತ್ತಿ: ______________________ ಉದ್ಯೋಗದಾತ: __________________________

**ಆರೋಪಿತ ಸಂತ್ರಸ್ತದ ವಿವರಗಳು** *(ಒಂದು ವೇಳೆ ತಿಳಿದಿದ್ದಲ್ಲಿ ಸಾಧ್ಯವಿದ್ದಷ್ಟು ಮಟ್ಟಿಗೆ ಪೂರ್ಣಗೊಳಿಸಿ)*